ಸಿಸಿ ನಂಃ 4102/2023
ಸಿ.ಡಬ್ಲೂ 2/
ಪಿ.ಡಬ್ಲೂ 1

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಚಿದಾನಂದ |
| ತಂದೆಯ ಹೆಸರು | ಃ | ಉಳವಪ್ಪ ಬೈಲವಾಡ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ರೈತ |
| ವಾಸ ಸ್ಥಳ | ಃ | ಯರಿಕೊಪ್ಪ. |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **04.08.2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಸೆಪ್ಟೆಂಬರ 2023 ರಇಲ್ಲಿ ನಾವು ಪಂಚಾಯಿತಿಯಲ್ಲಿ ಇದ್ದಾಗ ಧಾರವಾಡ ಕಡೆಯಿಂದ ಹುಬ್ಬಳ್ಳಿ ಕಡೆಗೆ ಒಂದು ಆಟೋ ಹೊಗುತ್ತಿದ್ದು ಸದರಿ ಆಟೋದಲ್ಲಿ ಪಡಿತರ ಅಕ್ಕಿ ಸಾಗಾಟಣೆ ಮಾಡುತಿತದ್ದರಿಂದ ಪೋಲಿಸರಿಗೆ ಮಾಹಿತಿ ಬಂದಿದ್ದು, ಆಗ ಪೋಲಿಸರು ನನಗೆ ಯರಿಕೊಪ್ಪಾ ಟೋಲಗೇಟ ಹತ್ತಿರ ಬಾ ಎಂದು ಕರೆದಿರುತ್ತಾರೆ. ನಾನು ಚಾಸಾ3 ರವರು ಅಲ್ಲಿ ಮಧ್ಯಾಹ್ನ 12.30-1.00 ಕ್ಕೆ ಹೊಗಿರುತ್ತೇವೆ. ನಂತರ ಯರಿಕೊಪ್ಪ ಅಂಗನವಾಡಿ ಹತ್ತಿರ ಒಂದು ಆಟೋ ಇದ್ದು ಅದರಲ್ಲಿ ಒಟ್ಟು 5 50 ಕೆಜಿ ಅಕಿಕ್ಕಿಯ ಪ್ಯಾಕೆಲೇಟ ಇದ್ದು ಅವುಗಳನ್ನು ಕೆಳಗೆ ಇಳಿಸಿದ್ದರು ಪ್ರತಿ ಒಂದು ಪ್ಯಾಕೇಟನಲ್ಲಿ 2 ಕೆಜಿಯಂತೆ ಪರಿಶೀಲನೆ ತೆಗೆದಿರುತ್ತಾರೆ. ಆಹಾರ

ಇಲಾಖೆ ಅಧಿಕಾರಿಗಳು ತೆಗೆದುಕೊಂಡಿರುತ್ತಾರೆ. ಸದರಿ ಆಟೋ ನಂಬರ ಗೊತ್ತಿಲ್ಲ. ಸದರಿ ಆಟೋ ಚಾಲಕನ ಹೆಸರು ಮೆಹಬೂಬ ಗುಂಡಕಲ್. ನಂತರ ಆರೋಪಿಯನ್ನು ವಿಚಾರಿಸಿದಾಗ ಹುಬ್ಬಳ್ಳಿಯ ಒಂದು ಗೂಡಾನಿಗೆ ವ್ಯಾಪಾರ ಮಾಡಲು ಒಯ್ಯುತ್ತಿದ್ದೆನೆ ಎಂದು ಹೇಳಿರುತ್ತಾರೆ. ನಂತರ ಆಟೋವನ್ನು ಠಾಣೆಗೆ ತೆಗೆದುಕೊಂಡು ಬಂದಿರುತ್ತಾರೆ. ಪೋಲಿಸರು ಪಂಚನಾಮೆ ಮಾಡಿದ್ದು ಸದರಿ ಪಂಚನಾಮೆಯನ್ನು ನಿಪಿ.1 ಎಂದು , ಸಾಕ್ಷಿ ಸಹಿ ನಿಪಿ.1(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಸಾಕ್ಷಿ ನೊಡಿ ಗುರುತಿಸಿರುತ್ತಾರೆ.

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ಸದರಿ ಆರೋಪಿ ದಿಃ 20.09.2022 ರಲ್ಲಿ ಪಡಿತರ ಅಕ್ಕಿ ತೆಗೆದುಕೊಂಡು ಹೊಗುತ್ತಿದ್ದ ಎಂದರೆ ಸರಿ. ಸದರಿ ಆಟೋ ನಂ.ಕೆಎ.63/1652 ಇತ್ತು ಎಂದರೆ ಸರಿ. ನಂತರ ಆರೋಪಿಯನ್ನು ವಿಚಾರಿಸಿದಾಗ ಸದರಿ ಆರೋಪಿ ಆ ಅಕ್ಕಿಗಳನ್ನು ರೈತರಿದಂ ಖರೀದಿ ಮಾಡಿ ಅವುಗಳನ್ನು ಹುಬ್ಬಳ್ಳಿಗೆ 2 ನೇ ಆರೋಪಿ ಗುರಾಡಾನಿನಲ್ಲಿ ಇಟ್ಟು ನಂತರ ಕಾಳು ಸಂತೆಯಲ್ಲಿ

ಮಾರಾಟ ಮಾಡುತ್ತೇನೆ ಎಂದು ಹೇಳಿದ. ಜಪ್ತಿ ಮಾಡಿದ ಅಕ್ಕಿ ಸರಕಾರದ ಉಚಿತವಾಗಿ ಹಂಚುವ ಪಡಿತರ ಅಕ್ಕಿ ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

1. ಧಾರವಾಡದಿಂದ ಯರಿಕೊಪ್ಪಕ್ಕೆ ಹೊಗಲು ರಜತಗಿರಿ , ತೇಜಸ್ವಿ ನಗರ, ಎಸ ಡಿ ಎಂ ಕಾಲೇಜ , ನುಗ್ಗಿಕೇರಿ , ಬೈಪಾಸ ದಾಟಿದ ಮೇಲೆ ಯರಿಕೊಪ್ಪ ಗ್ರಾಮ ಎಂದರೆ ಸರಿ. ನುಗ್ಗಿಕೇರಿಯಿಂದ ಕಲಘಟಗಿವರಗೂ ರೈತರು ಭತ್ತ ಬೆಳೆಯುತ್ತಾರೆ ಎಂದರೆ ಸರಿ. ಯರಿಕೊಪ್ಪ ದಾಟಿದ 4 ಕಿ ಮಿ ನಂತರ ನಾಯಕನಹುಲಿಕಟ್ಟಿ ಇದೆ ಎಂದರೆ ಸರಿ. ಆ ದಿನ ಪೋಲಿಸರು ನನಗೆ ಲಿಖಿತವಾಗಿ ನೊಟಿಸ ನೀಡಿಲ್ಲ. ನನಗೆ ಬಿ ಪಿ ಎಲ್ ಹಾಗೂ ಎ ಪಿ ಎಲ್ ರೇಷನ ಕಾರ್ಡಗಳ ಬಗ್ಗೆ ಗೊತ್ತು. ನಾನು ನಮ್ಮ ಊರಿನಲ್ಲಿ ಮುಖ್ಯಸ್ಥನಾಗಿದ್ದು ಊರಿನಲ್ಲಿ ಏನೇ ಇದ್ದರು ಪೋಲಿಸರು ನಮ್ಮನ್ನು ಬೇಟಿಯಾಗುತ್ತಾರೆ ಎಂದರೆ ಸರಿ. ಪಂಚನಾಮೆಯನ್ನು ನಾನು ಹೇಳಿ ಬರೆಸಿಲ್ಲ ಎಂದರೆ ಸರಿ. ಧಾರವಾಡದಿಂದ ಹುಬ್ಬಳಿಗೆ ಹೊಗಬೆಕಾದರೇ ರಮ್ಯಾ ರೆಸಿಡನ್ಸಿಯಿಂದ ಮುಖ್ಯ ಹೆದ್ದಾರಿ ಮೂಲಕ ಹೊಗಬೆಕು ಎಂದರೆ ಸರಿ. ಹುಬ್ಬಳ್ಳಿಗೆ ಹೊಗಲು ಯರಿಕೊಪ್ಪ ಗ್ರಾಮದ ಮೂಲಕ ಹೊಗಲು ಆಗುವುದಿಲ್ಲ ಎಂದರೆ ಸರಿ. ನಾನು 2-3 ಇದೇ ತರಹದ ಪ್ರಕರಣಗಳಲ್ಲಿ ಸಾಕ್ಷಿಯಾಗಿ ಸಹಿ ಮಾಡಿದ್ದೆನೆ ಎಂದರೆ ಸರಿ. ಚಾಸಾ3 ರವರು ನಮ್ಮ ಊರಿನಿಂದ 2 ಕಿ ಮಿ ದೂರದಲ್ಲಿ ಇದ್ದಾರೆ ಎಂದರೆ ಸರಿ.

2. ಪೋಲಿಸರು ಮಾಹಿತಿಯನ್ನು ನಾನು ಪಂಚಾಯಿತಿ ಆವರಣದಲ್ಲಿ ಕುಳಿತಿದ್ದಾಗ ಬಂದು ಹೇಳಿದ್ದಾರೆ ಎಂದರೆ ಸರಿ. ನಿಪಿ.1 ಕ್ಕೆ ಪಂಚಾಯಿತಿಯಲ್ಲಿ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಂಗನವಾಡಿಯಲ್ಲಿ ಸಹಿ ಮಾಡಿದ್ದೆನೆ ಎನ್ನುತ್ತಾರೆ. ಪೋಲಿಸರು ಸದರಿ ಆಟೋದಲ್ಲಿ ಅಕ್ಕಿ ಒಯ್ಯುತ್ತಿದ್ದಾರೆ ಎಂದು ನನಗೆ ಯಾವದೆ ಮಾಹಿತಿ ನೀಡಿಲ್ಲ ಎಂದರೆ ಸರಿ. ನಿಪಿ.1 ರಲ್ಲಿರುವ ಬರೆದ ವಿಚಾರ ನನಗೆ ಗೊತ್ತಿಲ್ಲ ನನ್ನ ಊರ ಮುಖಂಡ ಆಗಿರುವ ಕಾರಣ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಆಟೋ ನಂಬರ ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿ ಹೆಸರು ನನಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನಮ್ಮ ಸಮಕ್ಷಮ ವಾಹನವನ್ನು ತಡೆ ಹಿಡಿದಿಲ್ಲ ಎಂದರೆ ಸರಿ. ಅದೇ ರಿತಿ ಅಕ್ಕಿಯನ್ನು ಸಹ ನನ್ನ ತಮಕ್ಷಮ ಹಿಡಿದಿಲ್ಲ ಎಂದರೆ ಸರಿ. ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಬಗ್ಗೆ ಈ ದಿನ ಸರಕಾರಿ ವಕೀಲರು ಸೂಚನೆ ಮೆರೇಗೆ ಅವರ ಹೆಸರು ಹೆಳಿದ್ದೆನೆ ಎಂದರೆ ಸರಿಯಲ್ಲ. ನಮ್ಮ ಕಡೆ ಹೆಚ್ಚಿಗೆ ಭತ್ತ ಬೆಳೆಯುತ್ತಿದ್ದು ಅಕ್ಕಿಯನ್ನು ಹುಬ್ಬಳ್ಳಿಗೆ ಮಾರಾಟ ಮಾಡತಾತರೆ ಎಂದರೆ ಸರಿ. ನಿಪಿ.1 ನ್ನು ನನ್ನ ಸಮ್ಷಮ ಮಾಡಿಲ್ಲ ಪೋಲಿಸರಿಗೆ ಸಹಾಯ ಮಾಡಲು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.